ಇರುವೆಗಳಿಗೆ ಮಳೆಯ ಮುನ್ಸೂಚನೆ ಗೊತ್ತಾಗುತ್ತದಂತೆ. ನಾಲ್ಕು ದಿನದ ನಂತರ ಮತ್ತೆ ಮಳೆ ಸುರುವಾಗುತ್ತದೆ ಎಂಬುದು ಅವಕ್ಕೆ ಗೊತ್ತಾಗಿತ್ತು. ಮಳೆ ಮತ್ತೆ ನಿಲ್ಲುವುದು ಇನ್ನೆಷ್ಟು ದಿನಕ್ಕೋ? ಆದ್ದರಿಂದ ಆಹಾರ ಸಂಗ್ರಹಿಸುವುದಕ್ಕಾಗಿ ಅವು ಗೂಡುಗಳನ್ನು ಬಿಟ್ಟು ಹೊರಬಂದಿದ್ದವು.

ಆ ಇರುವೆಗಳ ಸಾಲಿನಲ್ಲಿ ಒಂದು ತಾಯಿ ಇರುವೆಯೂ ಇತ್ತು. ಅದು ತನ್ನ ಸಣ್ಣ ಮರಿಯೊಂದಿಗೆ ಸರತಿ ಸಾಲಿನಲ್ಲಿ ಹೊರಟಿತ್ತು. ತೇವದ ಮಣ್ಣು, ಅಲ್ಲಲ್ಲಿ ನಿಂತ ನೀರು ಮುಂತಾದ ಅಡಚಣೆಗಳಿದ್ದವು. ಹೀಗಾಗಿ ತಾಯಿ ಇರುವೆ ಸಾಲಿನಲ್ಲಿ ಹಿಂದಾಯಿತು. ಆಹಾರವನ್ನು ಸಂಗ್ರಹಿಸಿ ತರುವ ಧಾವಂತದಲ್ಲಿ ಉಳಿದೆಲ್ಲ ಇರುವೆಗಳು ಮುಂದಾಗಿ ಹೊರಟವು. ತಾಯಿ ಇರುವೆ ತನ್ನ ಮಗು ಜೊತೆ ತೀರಾ ಹಿಂದೆ ಬಿತ್ತು. ಅಷ್ಟರಲ್ಲಿ ತನ್ನ ದಾರಿಯಲ್ಲಿ ನೆಲದಿಂದ ಚಿಮ್ಮಿ ಎದ್ದಿದ್ದ ಒಂದು ಬಣ್ಣದ ಅಣಬೆ ಕಾಣಿಸಿತು. ಅದು ಬಣ್ಣದ ಛತ್ರಿಯಂತೆ ನೋಡಲು ಕೂಡ ಸುಂದರವಾಗಿತ್ತು. ಆ ಅಣಬೆಯ ಒಂದು ಭಾಗವನ್ನು ಸಂಗ್ರಹಿಸಿ ಅಲ್ಲಿಂದಲೇ ಗೂಡಿಗೆ ಮರಳಲು ತಾಯಿ ಇರುವೆ ತೀರ್ಮಾನಿಸಿತು. ಆ ಅಣಬೆ ಛತ್ರಿಯ ಒಳಭಾಗಕ್ಕೆ ನುಸುಳಿ ಅದನ್ನು ಕಚ್ಚಿ ಪುಡಿಮಾಡತೊಡಗಿತು. ಅಣಬೆ ಛತ್ರಿಯ ಕೆಳಭಾಗದಲ್ಲಿ ನಿಂತಿದ್ದ ಮರಿಯನ್ನು ಕರೆದು, 'ಬಲಗಡೆ ಇರುವ ನದಿಯ ಕಡೆ ಹೋಗಬೇಡ, ನೀರು ರಭಸದಿಂದ ಹರಿಯುತ್ತಿದೆ' ಎಂದು ಎಚ್ಚರಿಸಿತು. ಅಮ್ಮ ಅಣಬೆ ಕೀಳುವುದರಲ್ಲಿ ತಲ್ಲೀನವಾಗಿದ್ದಾಗ ಮಗು ನದಿಯ ನೀರಿನ ಹರಿವನ್ನು ನೋಡುತ್ತಾ ಆಕರ್ಷಣೆಗೆ ಒಳಗಾಯಿತು. ಸೂರ್ಯನ ಬಿಸಿಲಿಗೆ ಹೊಳೆಯುತ್ತಿದ್ದ ನೀರನ್ನು ಮುಟ್ಟಬೇಕೆಂದು ಆಸೆಯಾಯಿತು. ತನ್ನ ಮೂಗಿನ ತುದಿಯ ಪುಟ್ಟ ಕೈಗಳಿಂದ ನೀರನ್ನು ಮುಟ್ಟಿ ನೋಡಲು ಹೋಯಿತು. ಆದರೆ, ಅದು ಹೇಗೋ ನೀರಿನಲ್ಲಿ ಬಿದ್ದುಬಿಟ್ಟಿತು. ನೀರಿನ ಸೆಳವಿಗೆ ಸಿಕ್ಕಿ ದಂಡೆಯಿಂದ ದೂರ ಹೋಯಿತು. ಕಡೆಗೆ ಹೇಗೋ ಸಾವರಿಸಿಕೊಂಡು ನೀರಿನ ನಡುವೆ ಇದ್ದ ದಿಬ್ಬವನ್ನು ಹತ್ತಿ ಕೂತಿತು. ಸುತ್ತಲೂ ಹರಿಯುವ ನೀರು ಕಂಡು ಗಾಬರಿಯಾಗಿ ಅಮ್ಮನನ್ನು ಕೂಗತೊಡಗಿತು.

ತನಗೆ ಬೇಕಾದಷ್ಟು ಅಣಬೆಯ ಚೂರುಗಳನ್ನು ಕಚ್ಚಿಕೊಂಡ ಇರುವೆ ತನ್ನ ಮಗುವಿನ ಗಾಬರಿಯ ಕೂಗು ಕೇಳಿ ಓಡೋಡಿ ಬಂತು. ನದಿಯ ದಂಡೆಯಲ್ಲಿ ಮಗು ಇಲ್ಲ! ಎಲ್ಲಿಂದ ಕೂಗುತ್ತಿದೆ? ಇರುವೆ ತಡಕಾಡುತ್ತಾ ದೂರದೃಷ್ಟಿಯಲ್ಲಿ ನೋಡಿತು. ಮರಿ ಇರುವೆ ನದಿಯ ನಡುವಿನ ದಿಬ್ಬದಲ್ಲಿ ಕುಳಿತು ಅಳುತ್ತಿದೆ! ಈಗ ಏನು ಮಾಡುವುದು? ಇರುವೆ ತನ್ನ ಮಗುವಿನ ರಕ್ಷಣೆಯ ಬಗ್ಗೆ ಆಲೋಚಿಸತೊಡಗಿತು. ಅಲ್ಲೊಂದು ಕಪ್ಪೆ ನೀರ ಅಂಚಿನಲ್ಲಿ ಧ್ಯಾನ ಮಾಡುವವಂತೆ ಕುಳಿತಿತ್ತು. ಕಪ್ಪೆಯನ್ನು ನೋಡಿದ ಇರುವೆಗೆ, 'ಸಹಾಯಕ್ಕೆ ಸದ್ಯ ಒಬ್ಬ ಸಿಕ್ಕಿದನಲ್ಲ' ಎಂದುಕೊಂಡು ಕಪ್ಪೆಯ ಬಳಿ ಹೋಯಿತು. 'ಕಪ್ಪೆಯಣ್ಣಾ ಕಪ್ಪೆಯಣ್ಣಾ, ನನಗೊಂದು ಸಹಾಯ ಮಾಡುತ್ತೀಯ' ಎಂದು ಕೇಳಿತು. ಕಪ್ಪೆ ಇರುವೆಯ ಕಡೆ ತಿರುಗಿಯೂ ನೋಡದೆ ತಿರಸ್ಕಾರದಿಂದ ಏನು ಸಹಾಯ ಎಂದು ಕೇಳಿತು. 'ನನ್ನ ಮಗು ನೀರಿಗೆ ಬಿದ್ದು ಹೇಗೋ ತೇಲಿಕೊಂಡು ಹೋಗಿ ನಡುಗಡ್ಡೆಯಲ್ಲಿ ಕುಳಿತಿದೆ. ದಯವಿಟ್ಟು ನನ್ನ ಮಗುವನ್ನು ಕರೆತಂದು ಮುಟ್ಟಿಸುತ್ತೀಯಾ' ಎಂದು ದೈನ್ಯದಿಂದ ಕೇಳಿಕೊಂಡಿತು. 'ನಿನ್ನ ಮಗು ನೀರಿಗೆ ಬಿದ್ದರೆ ನಾನೇನು ಮಾಡಲಿ? ಅದನ್ನು ಸರಿಯಾಗಿ ನೋಡಿಕೊಳ್ಳುವ ಜವಾಬ್ದಾರಿ ನಿನ್ನದು. ನಾನು ನಿನಗೆ ಸಹಾಯ ಮಾಡುವುದಿಲ್ಲ ಹೋಗು' ಎಂದು ರೇಗಿ ನೀರಿನಲ್ಲಿ ಮುಳುಗಿ ಮಾಯವಾಯಿತು. ಆಗ ಇರುವೆ, 'ದೇವರು ನಿನಗೆ ನೀರಿನಲ್ಲಿ ಈಜುವ ಶಕ್ತಿ ಕೊಟ್ಟಿದ್ದಾನೆ. ಆದರೆ, ನೀನು ಅದನ್ನು ಸಹಾಯಕ್ಕೆ ಬಳಸುತ್ತಿಲ್ಲ, ಇರು ನಿನಗೆ ಮಾಡುತ್ತೇನೆ' ಎಂದು ಕಪ್ಪೆಯನ್ನು ಬೈಯುತ್ತ ಮುಂದೆ ಹೋಯಿತು.

ಇರುವೆಯ ಕಣ್ಣಿಗೆ ಹುತ್ತವೊಂದು ಕಾಣಿಸಿತು. ಹುತ್ತದ ಬಳಿ ಹೋದ ಇರುವೆ, 'ಹಾವಣ್ಣ ಹಾವಣ್ಣ' ಎಂದು ಕೂಗಿತು. ಹುತ್ತದ ಒಂದು ಕೋವಿನಿಂದ ತನ್ನ ತಲೆಯನ್ನು ಹೊರಹಾಕಿದ ಹಾವು